ಮೈಸೂರ ಗೆಜೆಟ್.

ನಂ. 36 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಸೆಪ್ಟೆಂಬರ್ ತಾ|| 10, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರ್ಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬುಕ್‌ಪೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 9ನೇ ಆಗಸ್ಟು 1887.

ನಂ. 77.—ಮಕ್ಕಾಕ್ಕೆ ಖುಷ್ಕೀಮೇಲೂ ಸಮುದ್ರದ ಮೇಲೂ ಪ್ರಯಾಣ ಮಾಡುವಂತಾವರಿಗೆ ಜೋಕೆ ಮತ್ತು ಅನುಕೂಲ್ಯತೆ ವುಂಟು ಮಾಡಿಕೊಡುವ ಬಗ್ಯೆ ಇಂಡಿಯಾ ಗವರ್ಣಮೆಂಟಿನವರು ಮೆ|| ತಾಮ್ಸ್‌ಕೂಕ್ ಅಂಡ್ ಸನ್ಸ್‌ಯವರನ್ನ ಏಜಂಟರಾಗಿ ನೇಮಿಸಿ ಅದಕ್ಕಾಗಿ ಏರ್ಪಾಟುಗಳನ್ನ ಮಾಡಿರುವದರಿಂದ ಮಕ್ಕಾಕ್ಕೆ ಪ್ರಯಾಣ ಮಾಡಲಿಚ್ಛೆಯುಳ್ಳ ಜನಗಳು ಸದರೀ ಏರ್ಪಾಡಿಗೆ ನಿಗೇ ಕೊಡತಕ್ಕದ್ದು.

2. ಸದರೀ ಏರ್ಪಾಡುಗಳಿಂದ ವುಂಟಾಗಿರುವ ಪ್ರಯೋಜನಗಳ ತಪಸೀಲ್ ಮೈಸೂರು ಶೇಮೆಯ ಡಿಸ್ಟ್ರಿಕ್ಟುಗಳ ಡೆಪ್ಯುಟೆ ಕಮ್ಮಿಷನರ ಆಫೀಸ್‌ಗಳಿಗೆ ಅರ್ಜೀ ಬರದುಕೊಂಡಲ್ಲಿ ತಿಳಿಯಬರುತ್ತೆ.

ತಾರೀಖು 18ನೇ ಆಗಸ್ಟು . 887.

ನಂ. 92.—1877ನೇ ಇಸವಿ IIIನೇ ನಂಬರ್ ರೆಜಿಸ್ಟ್ರೇಷ್ನ ಆಕ್ಟಿನ 59ನೇ ಸೆಕ್ಷನ್ ಅನುಸರಿಸಿ, ಮೈಸೂರು ಶೀಮೆಯ ರೆಜಿಸ್ಟ್ರೇಷ್ನ ಇನ್ಸ್‌ಪೆಕ್ಟರ್ ಜನರಲ್ ಯವರಿಂದ ಮಾಡಲ್ಪಟ್ಟ ರೆಜಿಸ್ಟ್ರೇಷ್ನ ರೂಲುಗಳ 89ನೇ ಕಲಮಿಗೆ ಕೇರಿಸಲ್ಪಟ್ಟಿರುವ ಈ ಕೆಳಗೆ ಕಂಡ ಜಾಸ್ತೀ ನಿಬಂಧನೆಯು ಮಂಜೂರಾತಿಯನ್ನು ಹೊಂದಿ ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

ಕಲಮು 89 A. (1.) ಇದರ ಕೆಳಗೆ ನಮೂದಾಗುವ ದಸ್ತಾವೇಜುಗಳು, ಯಿದುವರವಿಗೂ 1ನೇ ನಂಬರ್ ರೆಜಿಸ್ಟರ್ ಬುಕ್ಕಿನಲ್ಲಿ ದಾಖಲ್ ಮಾಡಲ್ಪಡುತ್ತಾ ಯಿದ್ದದ್ದಕ್ಕೆ ಬದಲಾಗಿ "1ನೇ ನಂಬರ್ ಸಪ್ಲಿಮೆಂಟರಿ ರೆಜಿಸ್ಟರ್ ಬುಕ್ಕು" ಯಂಬ ಹೆಸರುಳ್ಳ ಅಲಾಹಿದ ಬುಕ್ಕಿನ ಲ್ಲಿ ಕೇರಿಸಿಜಲ್ಪಟ್ಟು, ಆ ದಸ್ತಾವೇಜುಗಳು ಸಪ್ಲಿಮೆಂಟರಿ ಬುಕ್ಕಿನ ಫಲಾನೇ ಪುಟಗಳಲ್ಲಿ ಚಿಕಟಾಯಿಸಲ್ಪಟ್ಟವೆ ಯಂಬದಾಗಿ, 1ನೇ ನಂಬರ್ ರೆಜಿಸ್ಟರ್ ಬುಕ್ಕಿನೊಳಗೆ ಸರಿಯಾದ ಸ್ಥಳದಲ್ಲಿ ವೊಂದು ಷರಾ ನಮೂದಿಸತಕ್ಕದ್ದು:—

(a) ಮ್ಯಾಪುಗಳ ವ ಪ್ಲಾನುಗಳ ನಕಲುಗಳು (ಸೆಕ್ಷನ್ 61.)

(b) ಇತರ ರೆಜಿಸ್ಟರಿಂಗ್ ಆಫೀಸರುಗಳಿಂದ ಬಂದ ದಸ್ತೈವಜುಗಳ ನಕಲುಗಳು ವ ಮಿನೋರಾಂಡಂಗಳು (ಸೆ|| 64ರ ಲಾಗಾಯತು 67ರ ವರಿವಿಗೆ.)

(c) 1871ನೇ ಇಸವಿಯ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು ಅನುಸರಿಸಿ ರೆವಿನ್ಯೂ ಆಫೀಸರುಗಳಿಂದ ಕೊಡೋಣಾಗುವ ಸರಟಿಫಿಕೇಟ್‌ಗಳ ನಕಲುಗಳು, ಮತ್ತು ಸಿವಿಲ್ ಪ್ರೊ|| ಕೋಡಿನ 316ನೇ ಸೆಕ್ಷನ್ನನುಸರಿಸಿ ಕೋರ್ಟುಗಳಿಂದ ಕೊಡೋಣಾಗುವ ಹರಾಜ್ ಸರಟಿಫಿಕೇಟುಗಳ ನಕಲುಗಳು (ಸೆಕ್ಷನ್ 89.)

(d) ರೂಢಿಯಲ್ಲಿಲ್ಲದ ಭಾಷೆಗಳಲ್ಲಿ ಬರೆಯಲ್ಪಟ್ಟ ದಸ್ತಾವೇಜುಗಳ ತರ್ಜುಮೆ ವ ನಕಲುಗಳು (ಸೆಕ್ಷನ್ 62.)

(2.) ಸದರೀ ದಸ್ತಾವೇಜುಗಳಿಗೆ ನಂಬರು ಕೊಡೋಣ ವ ಇಂಡೆಕ್ಸ್ ಮಾಡೋಣ ಯಿವುಗಳ ಕ್ರಮವು ರೂಲ್ಸಿನ 88ನೇ ಕಲಮಿನ ಆಖೈರ್ ಭಾಗದಲ್ಲಿ ವಿಧಿಸಲ್ಪಟ್ಟಿರುವ ಕ್ರಮವನ್ನೇ ಅನುಸರಿಸಿರತಕ್ಕದ್ದು.

ತಾರೀಖು 25ನೇ ಆಗಸ್ಟು 1887.

ಕ್ಯಾಂಪ್ ನಂ. 1043.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಉಡ ಯಾರ್ಡಿನಲ್ಲಿರುವ ತ್ಯಾಗದ ದಿಮ್ಮಿಗಳು ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ಈ ಕೆಳಗೆ ನಮೂದಾಗುವ ದರಗಳ ಮೇರಿಗೆ ವಿಕ್ರಯಿಸಲ್ಪಡುವವು:—

	ಸಲೆಅಡಿ 1ಕ್ಕೆ ರೂ. ಆ. ಪೈ.		ಸಲೆಅಡಿ 1ಕ್ಕೆ ರೂ. ಆ. ಪೈ.
1ನೇ ಕ್ಲಾಸ್, ಅವ್ವಲ್	.. 1 10 0	3ನೇ ಕ್ಲಾಸ್	.. 1 2 0
ಡಿಟೋ	.. 1 8 0	4ನೇ ಕ್ಲಾಸ್	.. 1 0 0
2ನೇ ಕ್ಲಾಸ್	.. 1 6 0		

ಕ್ಯಾಂಪ್ ನಂ. 1056.—ಪಾವಗಡ ತಾಲ್ಲೂಕು ಅಮಲ್ದಾರ್ ಶಾಮಯ್ಯಂಗಾರ್ರಿಗೆ, 1887ನೇ ಇಸವಿ ಮೇ 14ನೇ ಮುಕ್ತುಂ 461ನೇ ನಂಬರ್ ಇಸ್ತಿಹಾರಿನ ದೆಸೇಯಿಂದ ಕೊಡಲ್ಪಟ್ಟ ಯರಡು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಯಿನ್ನೊಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 160.—ಸ್ ೧೮೮೬ನೇ ಇಸವಿ ಜೂನ್ 4ನೇ ಮುಕ್ತುಂ 89ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯನ್ನ ರದ್ದುಪಡಿಸಿ, ಇದರಿಂದ ಪ್ರಕಟಿಸಲ್ಪಡುವದೇನಂದರೆ-ಫಾರೆಸ್ಟು ರೂಲ್ಸ್ 32ನೇ ಸೆಕ್ಷನಿನ 1ನೇ ಕಲಂ ಅನುಸರಿಸಿ, ಇನಾಂ ಜಮೀರ್ಗಾಗಳಲ್ಲಿರುವ ಯಾವ ಮರಗಳನ್ನಾಗಲಿ, ಚೌಬೀನೆಯನ್ನಾಗಲಿ, ನಾಟಾ ಯಾ ದೂಲ ವಗೈರೇಗಳನ್ನ ಅಂಥಾ ಇನಾಂಜಮೀರ್ಗಾಗಳು ಯಾವ ಡಿಸ್ಟ್ರಿಕ್ಟಿನಲ್ಲಿ ರುತವ್ವೋ ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಅಥವಾ ಆ ಬಗ್ಗೆ ಡೆಪ್ಯುಟಿ ಕಮ್ಮಿಷನರವರಿಂದ ಕ್ರಮಪ್ರಕಾರ ವೊಕರರ್ ಮಾಡುವ ಇತರ ಆಫೀಸರಿಂದಾಗಲಿ ಕ್ರಮವಾಗಿ ಲೈಸೆನ್ಸು ಯಿಲ್ಲದೇ ಸದರೀ ಮರ ವಗೈರೇಯನ್ನ ಕಡಿಯಲೂ ಕೂಡದು ಯಾ ಸಾಗಿಸಲೂ ಕೂಡದು.

ತಾರೀಖು 26ನೇ ಆಗಸ್ಟು 1887.

ಕ್ಯಾಂಪ್ ನಂ. 1048.—ಸೊರಬ ತಾಲ್ಲೂಕು ಅಮಲ್ದಾರ್ ವೆಂಕಟರಾಯರಿಗೆ, 1887ನೇ ಇಸವಿ ಸೆಪ್ಟೆಂಬರ್ ಗುರ್ಸೀ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಬಗರ್ ತಲಬಿನಮೇಲೆ ಭೊಂದು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ವೆಂಕಟರಾಯರು ರಜಾದ ಮೇಲೆ ಗೈರ್ ಹಾಜರ್ ಯಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ಸೊರಬ ತಾಲ್ಲೂಕು ಶಿರಸ್ತೇದಾರು) ಅದೇ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು. ಮತ್ತು ಅವರಿಗೆ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ 3ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರವನ್ನ ಇದರ ದೆಸೇಯಿಂದ ಕೊಡಲ್ಪಟ್ಟಿರುತ್ತೆ.

ತಾರೀಖು 29ನೇ ಆಗಸ್ಟು 1887.

ಕ್ಯಾಂಪ್ ನಂ. 1092.—ಶಿವಮೊಗ್ಗಾ ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಪುಟ್ಟಣ್ಣಶೆಟ್ಟಿಯವರಿಗೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, 3ನೇ ಕ್ಲಾಸ್ ಮಾಜಿಸ್ಟ್ರೇಟರ ಅಧಿಕಾರ ಕೊಡಲ್ಪಟ್ಟಿರುತ್ತೆ.

ನಂ. 100.—1886ನೇ ಇಸವಿ ಸೆಪ್ಟಂಬರ್ 18ನೇ ಮತ್ತುಂ ಕ್ಯಾಂಪ್ 640ನೇ ನಂಬರುಳ್ಳ ಇಸ್ತಿಹಾರಿನ ದೆಸೇಯಿಂದ, ದಸರಾ ಹಬ್ಬದ 6ನೇ ದಿವಸದ ಲಾಗಾಯತು 10 ದಿನಗಳ ವರಿವಿಗೂ ದರೋಬಸ್ತು ಕಛೇರಿಗಳೂ ಬರಖಾಸ್ತು ಮಾಡತಕ್ಕದ್ದೆಂದು ಹುಕ್ಕುಂ ಮಾಡಲ್ಪಟ್ಟಿರುತ್ತಷ್ಟೆ, ಸದರೀ ಇಸ್ತಿಹಾರನ್ನನುಸರಿಸಿ ಈ ವರುಷದ ದಸರಾ ಹಬ್ಬದ ರಜಾವು ಮಾಹೇ ಮಜಕೂರ್ ಸೆಪ್ಟಂಬರ್ ತಾರೀಖು 23ರ ಲಾಗಾಯತು ಅಕ್ಟೋಬರ್ 2ನೇ ತಾರೀಖು ವರಿವಿಗೆ ಈ ಯರಡು ದಿವಸಗಳೂ ಕೇರಿ ಯಿರತಕ್ಕದ್ದು.

ನಂ. 101.—1887ನೇ ಇಸವಿ ಆಗಸ್ಟು 20ನೇ ಮತ್ತುಂ 86ನೇ ನಂಬರ್ ಇಸ್ತಿಹಾರಿನೊಂದಿಗೆ ಘಾಯಿಷ್ ಮಾಡೋಣಾದ ಸ್ಮಂದಲ್ ಹರಾಜು ಬಾಬತು ರಿವೈಜೆಡ್‌ಯಾನೇ ಪರಿಷ್ಕರಿಸಲ್ಪಟ್ಟ ರೂಲ್ಸ್‌ಗಳ 5ನೇ ನಿಬಂಧನೇಯಲ್ಲಿ "ಮತ್ಯಾವ ಖಜಾನೆಯಲ್ಲಾಗಲಿ" ಯಂಬ ಮಾತುಗಳಿಗೆ ಬದಲಾಗಿ "ಇತರ ಯಾವ ಗವರ್ಮೆಂಟ್ ಖಜಾನೇಯಲ್ಲಾಗಲಿ ಪಾವತೀ ಮಾಡಲಿಕ್ಕೆ ಸ್ವಾತಂತ್ರ್ಯವುಳ್ಳ ವರ್ತಕ ಜನರ ವಿಷಯದಲ್ಲಿ ವಿನಾ" ಯಂಬ ಮಾತುಗಳನ್ನು ಸೇರಿಸತಕ್ಕದ್ದು.

ತಾರೀಖು 30ನೇ ಆಗಸ್ಟು 1887.

ನಂ. 99.—ನಾಟೂ ವ ಚಾಬೀನೆಯನ್ನ ಮೈಸೂರು ನೇಮಿಯಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸತಕ್ಕ ಬಗ್ಗೆ ಈ ಕೆಳಗೆ ಬರುವ ಪರಿಷ್ಕರಿಸಲ್ಪಟ್ಟ ರೂಲ್ಸ್‌ಯಾನೆ ನಿಬಂಧನೆಗಳು, ಶ್ರೀಮನ್ ಮಹಾರಾಜಾ ಸರಕಾರದವರ ಮಂಜೂರಾತಿಯನ್ನ ಹೊಂದಿ, ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತವೆ.

I. ನಡವಳಿತ.

1. ಪ್ರತಿ ಹರಾಜು ಡಿಸ್ಟ್ರಿಕ್ಟು ಚಾರ್ಜ್‌ಉಳ್ಳ ಫಾರೆಸ್ಟು ಆಫೀಸರಿಂದಾಗಲಿ, ಡೆಪ್ಯುಟಿ ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ನಡಿಸಲ್ಪಡತಕ್ಕದ್ದು.

2. ಚಡ ದರಖಾಸ್ತುದಾರನು ಖರೀದಿದಾರನಾಗಿರತಕ್ಕದ್ದು. ಯಾವದಾದರೊಂದು ಲಾಟಿನ ವಿಷಯದಲ್ಲಿ ತಕರಾರು ನುಂಟಾಗುವ ಪಕ್ಷದಲ್ಲಿ ಡಿಟೋ ಲಾಟು ಮರಳಿ ಹರಾಜಿನಿಂದ ವಿಕ್ರಯಿಸಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನು ತಾನು ಲಾಟು ತೆಗದುಕೊಂಡ ಕೂಡ್ಲೇ ಯಿದಕ್ಕಾಗಿಯೇ ಯಿಟ್ಟು ಯಿರುವ ವೊಂದು ಬುಕ್ಕಿನಲ್ಲಿ, ಆ ಲಾಟಿನ ನಂಬರ್ ಮತ್ತು ಅದರ ತಪಸೀಲಿನ ಪಕ್ಕದಲ್ಲಿ ರುಜೂ ಮಾಡತಕ್ಕದ್ದು. ಹಾಗೆ ರುಜೂಮಾಡೋಣದರಿಂದ ಲಾಟನ್ನ ಆ ಮನುಷ್ಯನು ಖರೀದಿಗೆ ತೆಗದುಕೊಂಡದ್ದು ಕಬೂಲ್ ಪಟ್ಟಂತೆಯೇ ತಿಳಿಯತಕ್ಕದ್ದು.

II. ಮೊಬಲಗ್ ಪಾವತಿಯ ಕ್ರಮ.

4. ಹರಾಜು ಆದಕೂಡ್ಲೆ ಖರೀದೀದಾರನಿಂದ ಬರತಕ್ಕ ವೊಟ್ಟು ಮೊಬಲಗ ನಮೂದ್‌ನಿಶಿ ವೊಂದು ಯಾದೀಯನ್ನೂ ಮತ್ತು ಡಿಪಾಜಿಟ್ ತರೀಕು ವೊಟ್ಟು ಮೊಬಲಗಿನ ಮೇಲೆ ಕೀಕಡಾ 25ಕ್ಕೆ ಕಡಿಮೆಯಿಲ್ಲದ ನೊಂದು ಮೊಬಲಗನ್ನ, ಹರಾಜ್ ತಾರೀಖು ಲಾಗಾಯತು ಸಂದರ್ಭಾನುಸಾರ 3ನೇ ಯಾ 5ನೇ ದಿನದೊಳಗಾಗಿಯೇ ತಾಲ್ಲೂಕು ಖಜಾನೆಯ ಘಾಸಲೇಯನ್ನೂ ಆಲೋಚನೆಯಲ್ಲಿ ತಂದು ಸಮೀಪದಲ್ಲಿರುವ ಸರ್ಕಾರದ ಖಜಾನೇಯಲ್ಲಿ ಪಾವತೀ ಮಾಡಲಿಕ್ಕೆ ವೊಂದು ಲೆಟರ್ ಆಫ್ ಅಡ್ವೈಸ್‌ಯಾನೇ ಮೇಲ್ ಕಾಗದವನ್ನೂ ಖರೀದೀದಾರನಿಗೆ

ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ರಸೀದೀ ಕೊಡತಕ್ಕದ್ದು. ಆ ರಸೀದಿಯನ್ನು ನಿಷ್ಕರ್ಷೆಯಾದ ಮೇರಿಗೆ ಹರಾಜು ತಾರೀಖು ಲಾಗಾಯತು ಐದನೇ ಯಾ ಯಂಟನೇ ದಿನ ಪೂರೈಸುವ ಒಳಗಾಗಿ, ಫಾರೆಸ್ಟ್ಸ್ ಆಫೀಸರರ ಬಳಿ ಹಾಜರ್ಮಾಡ ತಕ್ಕದ್ದು. ಫಾರೆಸ್ಟ್ಸ್ ಆಫೀಸರರು ಆ ರಸೀದಿಯ ಮೇಲೆ ಅದು ಹಾಜರ್ಮಾಡಲ್ಪಟ್ಟ ತಾರೀಖನ್ನು ಬರೆದು ಅದಕ್ಕೆ ತಮ್ಮ ಚಿಕ್ಕಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಸದರೀ ಕಾನೂನಿಗೆನುಸರಿಸಿ ನಡಿಯಲು ತಪ್ಪಿದಲ್ಲಿ ಅಂಥಾ ತಪ್ಪಿತಸ್ಥನಿಂದ ಖರೀದೀ ಮಾಡ ಲ್ಪಟ್ಟಿದ್ದ ನಾಟಾ ವ ಚೌಬೀನೆಯನ್ನು ಸಂಪೂರ್ಣವಾಗಿ ಯಾಗಲಿ ಯಾ ಅದರ ೪ ೫ ಪೈಕಿ ಒಂದು ಭಾಗವಾಗಲಿ, ಮರಳಿ ಹರಾಜ್ ಮಾಡ ಸಲಿಕ್ಕೆ ಫಾರೆಸ್ಟ್ಸ್ ಆಫೀಸರರಿಗೆ ಯಖ್ತ್ಯಾರೀ ಯಿರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರ ದೆಸೇಯಿಂದ ಮುಂಟಾಗುವ ನಷ್ಟ ವನ್ನು ಅವ್ವಲ್ ಖರೀದೀದಾರನೇ ಕಂಬಿತರ್ತಿ ಮಾಡತಕ್ಕದ್ದು. ಪರಂತು ನಫೇಯೇನಾದರೂ ಬಂದಲ್ಲಿ ಅದಕ್ಕೆ ಅವನು ಅರ್ಹನಾಗುವದಿಲ್ಲವು. ಅಂಥಾ ತಪ್ಪಿತಸ್ಥನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಹರಾಜಿನಲ್ಲಿ ತೆಗದುಕೊಳ್ಳಲ್ಪಟ್ಟ ಪ್ರೊಪ್ಟ್ಸು ತೀದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 30 ದಿವಸಗಳೊಳಗಾಗಿ ಯೇ ಪಾವತೀ ಮಾಡಲ್ಪಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಯಿಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ದಾಖಲಾಗ ತಕ್ಕದ್ದು. ಸರಕಾರಕ್ಕೆ ಸಲ್ಲಿಸಬೇಕಾದ ಮೊಬಲಗುಗಳು ವುಡ್‌ಯಾರ್ಡ್ಡಿಯಾವ ತಾಲ್ಲೂಕಿನಲ್ಲಿರುತ್ತದೆಯೋ ಆ ತಾಲ್ಲೂಕಿನ ಖಜಾನೇಯಲ್ಲಾಗಲಿ, ಡಿಸ್ಟ್ರಿಕ್ಟು ಖಜಾನೇಯಲ್ಲಾಗಲಿ, ಪಾವತೀ ಮಾಡಲ್ಪಡಬೇಕೇ ಹೊರ್ತು, ಮತ್ಯಾವ ಸರಕಾರೀ ಖಜಾನೇಯಲ್ಲಿ ಪಾವತೀ ಮಾಡಲಿಕ್ಕೆ ಸ್ವಾತಂತ್ರ್ಯವುಳ್ಳ ವರ್ತಕಜನರ ವಿಷಯಗಳಲ್ಲಿ ವಿನಾ ಇತರ ಯಾವ ಖಜಾನೇಯಲ್ಲಿಯೂ ಪಾವತೀ ಯಾಗತಕ್ಕದ್ದಲ್ಲವು.

III. ನಾಟಾವನ್ನು ವಪ್ಪಿಸುವಣಿ.

6. ನಾಟಾ ಖರೀದೀ ಮೊಬಲಗನ್ನು ಖರೀದೀದಾರನು ಪೂರಾ ಪಾವತೀ ಮಾಡಿ, "ಸಾಗಿಸಲಿಕ್ಕೆ ಲೈಸೆನ್ಸ್" ಫಾರೆಸ್ಟ್ಸ್ ಆಫೀಸರರಿಂದ ಪಡೆದ ಹೊರ್ತು ಯಾವ ನಾಟಾವನ್ನೂ ಸಾಗಿಸಕೂಡದು.

IV. ವುಡ್‌ಯಾರ್ಡಿನ ಬಾಡಿಗೆ.

7. ಹಿಂದಿನ ಸೆಕ್ಷನ್‌ಗಳ ನಿಬಂಧನೆಯನ್ನನುಸರಿಸಿ ಖರೀದೀ ಮೊಬಲಗು ಪಾವತಿಯಾದ ಬಾಬತು ನಾಟಾ ವ ಚೌಬೀನೆಯನ್ನು ಹರಾಜ್ ತಾರೀಖು ಲಾಗಾಯಿತು 30 ದಿವಸಗಳೊಳಗಾಗಿ ವುಡ್‌ಯಾರ್ಡ್ ಬಾಡಿಗೆ ಇಲ್ಲದೆ ಯಾವಾಗಲಾದರೂ ಸಾಗಿಸಲ್ಪಡಬಹುದು; ಅಥವಾ ಪ್ರತಿ ಸಂಗತಿಯ ಸಂದರ್ಭಾನುಸಾರ ಫಾರೆಸ್ಟ್ ಆಫೀಸರರಿಂದ ಮೊಕರರ್ಮಾಡಲ್ಪಡುವ (ಅಂದರೆ ಹರಾಜ್ ತಾರೀಖು ಲಾಗಾಯಿತು 90 ದಿನಗಳಿಗೆ ಅತಿಕ್ರಮಿಸದ) ಜಾಸ್ತಿ ವಾಯಿದೆ ಯೊಳಗೆ ಯಾವಾಗಲಾದರೂ ಉಡಿಯಾರ್ಡ್ ಬಾಡಿಗೆ ಇಲ್ಲದೇನೇ ಸಾಗಿಸಲ್ಪಡಬಹುದು. ಆದರೆ ಹರಾಜ್ ತಾರೀಖು ಲಾಗಾಯಿತು ಸದರೀ ವಾಯಿದೆಗಿಂತಲೂ ಹೆಚ್ಚಾಗಿ ವುಡ್‌ಯಾರ್ಡಿನಲ್ಲಿ ನಿಲ್ಲುವ ಪಕ್ಷಕ್ಕೆ ಹರಾಜ್ ತಾರೀಖು ಲಾಗಾಯ ತು ತಿಂಗಳು 1ಕ್ಕೆ ದಿವ್ಸಿ 1ಕ್ಕೆ ಅಥವಾ 20 ಬಂಬುಗಳಿಗೆ 8 ಆಣೆ ಮೇರಿಗೆ ವುಡ್‌ಯಾರ್ಡು ಬಾಡಿಗೆಯನ್ನು ವಸೂಲ್ಮಾಡತಕ್ಕದ್ದು. ಬಂದು ವೇಳೆ, ಅಂಥಾ ನಾಟಾ ಹಾಕಲ್ಪಟ್ಟಿದ್ದ ಸ್ಥಳವು ಬೇರೆ ಹೊಸ ನಾಟಾಗಳನ್ನಿಡುವದಕ್ಕೋಸ್ಕರ ಬೇಕಾಗುವ ಪಕ್ಷದಲ್ಲಿ ಖರೀದೀದಾರ ನಿಗೆ 10 ದಿನಗಳ ನೋಟೀಸ್ ಕೊಟ್ಟು ಆ ಬಳಿಕ ಆತನ ಖರ್ಚು ವ ಲುಕ್ಸಾನಿಗೆ ಗುರಿಮಾಡಿ ಖರೀದೀದಾರನ ನಾಟಾಗಳನ್ನು ವುಡ್‌ಯಾರ್ಡಿ ನ ಹೊರ ಭಾಗದಲ್ಲಿ ಜವಾಯಿಸಲಿಕ್ಕೆ ಫಾರೆಸ್ಟ್ಸ್ ಆಫೀಸರರಿಗೆ ಯಖ್ತ್ಯಾರಿ ಮುಂಟಾಗಿರತಕ್ಕದ್ದು.

V. ಸಾಗಿಸಲಿಕ್ಕೆ ಲೈಸೆನ್ಸ.

8. ಡಿಸ್ಟ್ರಿಕ್ಟಿನ ಇಂಚಾರ್ಜು ಫಾರೆಸ್ಟ್ಸ್ ಆಫೀಸರರ ರುಜೂನೀ "ನಾಟಾ ವ ಚೌಬೀನೆಯನ್ನು ಸಾಗಿಸಲಿಕ್ಕೆ ಲೈಸೆನ್ಸ್" ಪಡೆದ ಹೊ ರ್ತು, ಉಡಿಯಾರ್ಡಿನಿಂದ ಯಾವ ನಾಟಾ ಆಗಲಿ ಸಾಗಿಸಲ್ಪಡಕೂಡದು; ಅಂಥಾ ಲೈಸೆನ್ಸುದಾರರೆಲ್ಲರೂ ಲೈಸೆನ್ಸುಗಳಲ್ಲಿ ಸಮ್ಮೊದಿಸಲ್ಪಟ್ಟ ಷರತ್ತು ಪ್ರಕಾರ ನಡದುಕೊಳ್ಳಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವ್ಯಾಪಾರಸ್ಥನಾಗಲಿ ಯಾ ಇತರ ಮನುಷ್ಯನಾಗಲಿ ತನ್ನ ಲೈಸೆ ನಿನ ಷರತ್ತುಬಂದಿಗೆ ಅತಿಕ್ರಮಿಸಿ ನಡಿಯುತ್ತಾನೋ ಅಥವಾ ಕೊಟ್ಟ ವಾಯಿದೇ ಪೂರೈಸಿದ ವಡನೇ ತನ್ನ ಲೈಸೆನ್ಸನ್ನು ವಾಪಸ್ ಮಾಡು ವದಿಲ್ಲವೋ ಅಂಥಾ ಮನುಷ್ಯನು ಮೈಸೂರ್ ಫಾರೆಸ್ಟ್ಸ್ ರೂಲ್ಸುಗಳ 40ನೇ ಸೆಕ್ಷನಿನಲ್ಲಿ ವಿಧಿಸೋಣಾದ ಷರತ್ತುಗಳ ಪ್ರಕಾರ ಕ್ರಮ ನಡಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.

VI. ಪ್ರೊಟ್ಸು ವಿಷಯ.

9. ಫಾರೆಸ್ಟ್ ಆಫೀಸರರು, ಯಾವ ಕಾಲದಲ್ಲೇ ಆಗಲಿ ಖರೀದೀದಾರರಿಗೆ ಕಾರಣ ತೋರಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಖ್ತ್ಯಾರಿ ಮುಂಟಾಗಿರತಕ್ಕದ್ದು.

ಬಿ.ಮೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.